**<u>ದಿನಾಂಕಃ 21-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>**

**<u>ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀ.ಪಿ.ಆರ್.ಕೆ ವಕೀಲರಿಂದಃ</u>**

ನನ್ನ ತಂದೆಯ ಹೆಸರು ಹೊನ್ನಪ್ಪ ಎಂದರೆ ಸರಿ. ನನ್ನ ತಂದೆಯಾದ ಹೊನ್ನಪ್ಪ ರವರ ತಂದೆಯ ಹೆಸರು ಕೆಂಪನಿಂಗಪ್ಪ . ದಿಃ 04-12-1952 ರಂದು ನನ್ನ ತಂದೆಯಾದ ಹೊನ್ನಪ್ಪ ರವರು ಮರಣ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಅಜ್ಜನಾದ ಕೆಂಪನಿಂಗಪ್ಪ ರವರ ಅಣ್ಣತಮ್ಮಂದಿರ ಹೆಸರುಗಳು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಶಿವಪ್ಪ ಎನ್ನುವ ಒಬ್ಬ ತಮ್ಮನಿದ್ದ. ನನ್ನ ತಂದೆಯಾದ ಹೊನ್ನಪ್ಪ ರವರು ಮರಣ ಹೊಂದಿದ ಸಮಯದಲ್ಲಿ ನನ್ನ ಅಣ್ಣನಾದ ಬಸಪ್ಪ (1 ನೇ ಎದುರುದಾರ) ರವರಿಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಂದೆ ಹೊನ್ನಪ್ಪ ಮರಣ ಹೊಂದಿದ ಸಮಯದಲ್ಲಿ ನನ್ನ ಅಣ್ಣನಾದ ಬಸಪ್ಪ (1 ನೇ ಎದುರುದಾರ) ಅಲ್ಪವಯಿ ಆಗಿದ್ದ ಎಂದರೆ ಸರಿ. ನನ್ನ ಅಜ್ಜನಾದ ಕೆಂಪನಿಂಗಪ್ಪ ರವರಿಂದ ನಮ್ಮ ತಂದೆ ಹೊನ್ನಪ್ಪನಿಗೆ ಎಷ್ಟು ಆಸ್ತಿಗಳು ಬಂದಿವೆ ಎನ್ನುವುದು ನನಗೆ ನೆನಪಿಲ್ಲ (ದ್ಯಾಸಿಲ್ಲ) . ನಮ್ಮ ತಂದೆ

ಹೊನ್ನಪ್ಪನಿಂದ ನನ್ನ ಅಣ್ಣನಾದ ಬಸಪ್ಪನಿಗೆ ಯಾವ-ಯಾವ ಆಸ್ತಿಗಳು ಬಂದಿವೆ ಎನ್ನುವುದು ನನಗೆ ನೆನಪಿಲ್ಲ. ನಮ್ಮ ತಂದೆಯಾದ ಹೊನ್ನಪ್ಪನಿಂದ ನನ್ನ ಅಣ್ಣನಾದ ಬಸಪ್ಪನಿಗೆ ಯಾವ-ಯಾವ ಆಸ್ತಿಗಳು ಬಂದಿವೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಆದರೆ ನನಗೆ ಆ ದಾಖಲೆಗಳು ಯಾವುದು ಎನ್ನುವುದು ಗೊತ್ತಿಲ್ಲ. ನ್ಯಾಯಾಲಯಕ್ಕೆ ನಾನು ನಮ್ಮ ತಂದೆಯಾದ ಹೊನ್ನಪ್ಪನಿಂದ ನನ್ನ ಅಣ್ಣನಾದ ಬಸಪ್ಪನಿಗೆ ಯಾವ-ಯಾವ ಆಸ್ತಿಗಳು ಬಂದಿವೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ತನಗೆ ನೆನಪಿಲ್ಲ ಎಂದು ನುಡಿಯುತ್ತಾಳೆ. 1952 ನೇ ಇಸವಿಯಲ್ಲಿ ನಮ್ಮ ತಂದೆ ಮರಣ ಹೊಂದಿದ ನಂತರ ನಮ್ಮ ತಂದೆಯಾದ ಹೊನ್ನಪ್ಪನ ಹೆಸರಿನಲ್ಲಿದ್ದ ಆಸ್ತಿಗಳು ನಮ್ಮ ತಾಯಿಯಾದ ಚೆನ್ನಮ್ಮ ರವರ ಹೆಸರಿಗೆ ದಾಖಲು ಆಗಿವೆ ಆದರೆ ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ನಾನು ಈ ನ್ಯಾಯಾಲಯಕ್ಕೆ ನಮ್ಮ ತಂದೆಯ ಮರಣ ನಂತರ ನಮ್ಮ ತಾಯಿಯಾದ ಚೆನ್ನಮ್ಮ ರವರ ಹೆಸರು ದಾಖಲು ಆಗಿವೆ ಎನ್ನುವ ಬಗ್ಗೆ ದಾಖಲೆಗಳನ್ನು

ಹಾಜರು ಪಡಿಸಿರುವುದಿಲ್ಲ. ನನ್ನ ಬಳಿ ಆ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಮ್ಮ ತಾಯಿಯಾದ ಚೆನ್ನಮ್ಮ ರವರು ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓ.ಎಸ್.ನಂ.172/2012 ರ ದಾವೆಯನ್ನು ಸಲ್ಲಿಸಿದ್ದಳು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಓ.ಎಸ್.ನಂ.172/2012 ರ ದಾವೆಯಲ್ಲಿ ನನ್ನ ತಾಯಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದಾಳೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನ್ನ ತಾಯಿ ಸಾಕ್ಷಿ ನುಡಿಯುವ ಸಮಯದಲ್ಲಿ ತಲೆ ತಿರುಗಿ ಬಿದ್ದ ಕಾರಣಕ್ಕಾಗಿ ತಾನು ಸಾಕ್ಷಿ ನುಡಿದಿದ್ದೇನೆ ಎಂದು ನುಡಿಯುತ್ತಾಳೆ. ದಿಃ 04-12-2012 ರಂದು , ದಿಃ 02-01-2013 ಮತ್ತು ದಿಃ 15-03-2013 ರಂದು ನನ್ನ ತಾಯಿ ನ್ಯಾಯಾಲಯದಲ್ಲಿ PW-1 ಎಂದು ಸಾಕ್ಷಿ ನುಡಿದಿದ್ದಾಳೆ ಎಂದರೆ ಸರಿ. ದಿಃ 20-06-2013 ರಂದು ನಾನು ನ್ಯಾಯಾಲಯದಲ್ಲಿ PW-2 ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ರಾಣೇಬೆನ್ನೂರಿನ ಪ್ರಧಾನ ಹಿರಿಯ ಶ್ರೇಣಿ ನ್ಯಾಯಾಲಯದ ಓ.ಎಸ್ ನಂ.123/2015 ರಲ್ಲಿ ನಾನು PW-1 ಎಂದು ಸಾಕ್ಷಿ ನುಡಿದಿದ್ದೇನೆ ಎನ್ನುವುದು ನನಗೆ ನೆನಪಿಲ್ಲ.

P.W-1

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/*

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.